(6ನೇ ಪುಟದಿಂದ)

ಆಯತಾಕಾರವಾದ ಕಟ್ಟಡ ರೂಪುಗೊಂಡಿದೆ. ಒಂಡದಿಂದ ಏಳು ಮೀಟರ್ ಎತ್ತರದಲ್ಲಿರುವ ಪಾಯದಲ್ಲಿ ಸಹಜ ಗಾತ್ರದಲ್ಲಿ ಕೆತ್ತಿರುವ ಆನೆಯ ತದ್ರೂಪಿಗಳು, ಪುರಾಣದಲ್ಲಿ ಬರುವ ಅಪರೂಪದ ಪ್ರಾಣಿಗಳು ಹಾಗೂ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳ ಚಿತ್ರಣಗಳು ಕಂಡುಬರುತ್ತವೆ.

ಮುಖ್ಯ ದೇವಾಲಯವು. ವಾದ್ಯ ಮಂಟಪ, ನಂದಿ ಮಂಟಪ, ಕಂಬಗಳುಳ್ಳ ಸಾರ್ವಜನಿಕ ಸಭಾಂಗಣ, ಕೈಸಾಲೆ, ಗರ್ಭಗೃಹ, ಅನ್ನಪೂರ್ಣೇಶ್ವರಿ ಮತ್ತು ನಾಟ್ಯರೂಪಿ ಶಿವನ ಕೆತ್ತನೆಗಳು ಅಸಾಧಾರಣವಾದ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಹಿಂದೂ ಧರ್ಮದ ವೈಭವ ಹಾಗೂ ಮಾನವ ಮತ್ತು ಪ್ರಕೃತಿಯ ಸಂಬಂಧ, ಇತರ ಜೀವಿಗಳ ಜೊತೆ ಸಹಬಾಳ್ವೆ ಆಲೋಚನೆಗಳ ವಿಸ್ತಾರ ಎಲ್ಲವನ್ನು 1200 ವರ್ಷಗಳ ಕೆಳಗೆ ಶಿಲೆಯಲ್ಲಿ ಅರಳಿಸಿರುವುದು ನೋಡಿದರೆ ರೋಮಾಂಚನವಾಗುತ್ತದೆ. ಇಲ್ಲಿ ಯಾತ್ರಿಕರು ಸ್ವತಃ ಶಿವಲಿಂಗವನ್ನು ಸ್ಪರ್ಶಿಸಿ ಪುಳಕಗೊಳ್ಳಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಒಂದೇ ಶಿಲೆಯಲ್ಲಿ ಶಾಸ್ತ್ರೀಯವಾಗಿ ಇಡೀ ದೇವಾಲಯ ಸಮೂಹವನ್ನೇ ನಿರ್ಮಿಸಿರುವುದು ಭಾರತದ ಶಿಲ್ಪಕಲೆಯ ಮೇರು ನಿದರ್ಶನ.

**ಹೇಗೆ ಹೋಗಬೇಕು?:**

ಯಾತ್ರಿಕರು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ತಂಗಬಹುದು. ಅಲ್ಲಿಂದ ಕೈಲಾಶನಾಥ ದೇವಾಲಯ ಸಮುಚ್ಛಯ 30 ಕಿ.ಮೀ ದೂರದಲ್ಲಿದೆ. ಔರಂಗಾಬಾದ್‌ನಿಂದ 135 ಕಿ.ಮೀ ದೂರದಲ್ಲಿ ಅಜಂತಾ ಗುಹಾಂತರ ದೇವಾಲಯಗಳಿವೆ. ಮೊದಲು ಅಜಂತಾ ಗುಹೆಗಳನ್ನು ನೋಡಿ ಬಳಿಕ ಕೈಲಾಶನಾಥ ದೇವಾಲಯಗಳಿಗೆ ಭೇಟಿ ನೀಡುವುದು ಅನುಕೂಲಕರ. ಮಳೆಗಾಲದ ನಂತರ ಆಗಸ್ಟ್ ಮತ್ತು ಸೆಪ್ಟೆಂಬರ್ ಸಂದರ್ಶಿಸಲು ಉತ್ತಮ ಕಾಲ.



